ಸಮುದ್ರ ಮಥನ




### ಸಕಾಲಿಕ ಲೇಖನ

'ಪರ್ಯಾಯ ಇಂಧನ ಹೊರಳು ದಾರಿಯಲ್ಲಿ', ಮಂಜುನಾಥ ಹೆಬ್ಬಾರ್ ಅವರ ಮುಖಪುಟ ಲೇಖನ ಸಕಾಲಿಕ ಹಾಗೂ ಪ್ರಸ್ತುತದಲ್ಲಿ ಬರಿದಾಗುತ್ತಿರುವ ಇಂಧನ ಮೂಲಗಳ ಬಗ್ಗೆ ಎಚ್ಚರಿಕೆಯ ಗಂಟೆ ಬಾರಿಸಿದೆ.

– ಕೆ.ಪಿ.ರಾಮಗುಂಡಿ ಬೈಲಹೊಂಗಲ, ಗಾಣಧಾಳು ರಾಮಣ್ಣ ಚಿತ್ರದುರ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಮಹಾವೀರ ಕಾಸರ, ಎಸ್.ಲಕ್ಷ್ಮೀನರಸಿಂಹ ಚಾಮರಾಜನಗರ, ಮಧುರಾ ಸುಬ್ರಹ್ಮಣ್ಯ ಬೆಂಗಳೂರು, ಬಿ.ಎಂ. ಶಿವಲಿಂಗೇಗೌಡ ಬೇವಿನಹಳ್ಳಿ

### ಮಹತ್ವದ್ದು

'ನಿಮ್ಮೊಡನೆ'ಯಲ್ಲಿ 'ರಕ್ತ ವ್ಯರ್ಥವಾಗದಿರಲಿ' (ಬಿ.ಎಂ.ಹನೀಫ್) ಬರಹದಲ್ಲಿ ರಕ್ತದಾನದ ಅಗತ್ಯ, ಸಂಗ್ರಹಣೆ, ರಕ್ತ ಬ್ಯಾಂಕ್‌ಗಳ ಬಗ್ಗೆ ಅಂಕಿ ಅಂಶಗಳ ಸಮೇತ ನೀಡಿರುವ ಮಾಹಿತಿ ಮಹತ್ವದ್ದಾಗಿದೆ.

–ಎಲ್.ಗಿರಿಜಾರಾಜ್, ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ

### ಸರಾಗವಾಗಿ ಓದಿಸಿತು

ಕಥೆ 'ಚೆರ್ರಿಮರ' (ಎಂ.ಎಸ್.ರಘುನಾಥ್) ಸರಳವಾಗಿ, ಸರಾಗವಾಗಿ ಓದಿಸಿಕೊಂಡು ಹೋಯಿತು. ರಸ್ಕಿನ್ ಬಾಂಡ್ ಅವರ ಕಥೆ ಒಮ್ಮೆ ಇಂಗ್ಲಿಷ್ ಪತ್ರದಲ್ಲಿ ಪಾಠವಾಗಿತ್ತು. ಮಿನಿ ಕಥೆ 'ತಂದೆ ಇನ್ನಿಲ್ಲ' (ಚಿದಂಬರ ಬೈಕಂಪಾಡಿ) ಮನ ಮಿಡಿಯುವಂತಿತ್ತು.

–ಎಸ್.ವಿಜಯಕುಮಾರಿ ಬೆಂಗಳೂರು, ಬಾಳ್ಳುಪೇಟೆ ನೀಲಕಂಠಪ್ಪ ಹಾಸನ, ಪ.ಚಂದ್ರಕುಮಾರ ಗೌನಹಳ್ಳಿ, ನಾರಾಯಣಯಾಜಿ ಶಿರಾಲಿ

### ವಿಗ್ರಹ ಮಹಿಳೆಯದ್ದಲ್ಲ

'ನಿಮ್ಮ ಪುಟ'ದಲ್ಲಿ 'ಕದಂಬರ ಸಮರ ನಾಯಕಿ' ಎಂಬ ಶೀರ್ಷಿಕೆಯ ಚಿತ್ರದಲ್ಲಿರುವ ವಿಗ್ರಹ ಮಹಿಳೆಯದ್ದಲ್ಲ, ಪುರುಷನದ್ದು. ಪ್ರಾಚೀನ ಕಾಲದ ಅನೇಕ ಶಿಲ್ಪಗಳಲ್ಲಿ ವೀರಗಲ್ಲುಗಳಲ್ಲಿ ಪುರುಷರು ಹೀಗೇ ಚಿತ್ರಿತರಾಗಿದ್ದಾರೆ.

–ಡಾ.ಬಿ.ರಾಜಶೇಖರಪ್ಪ ಚಿತ್ರದುರ್ಗ

### ಸೊಗಸಾಗಿವೆ

'ಡಂಬಳದ ಹಂಬಲ' (ವೆಂಕಟೇಶ ಪ್ರಸನ್ನ ಎಚ್.ಎಂ.) ಪ್ರವಾಸ ಲೇಖನ ಹಾಗೂ ಚಿತ್ರಗಳು ಸೊಗಸಾಗಿವೆ.

–ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಮೇ.ಗೋ.ಸುಬ್ಬಣ್ಣ ಮೇಗರವಳ್ಳಿ, ಬಿ.ಎಂ. ಶಿವಲಿಂಗೇಗೌಡ ಬೇವಿನಹಳ್ಳಿ, ಅಮೃತೇಶ ತಂಡರ ಅಣ್ಣಿಗೇರಿ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

### ಹೆಮ್ಮೆಯ ವಿಷಯ

'ಗಿರ್ ಸಿಂಹಗಳಿಗೆ ವಲಸೆ ಭಾಗ್ಯ?' (ಎಚ್.ಪವನಕುಮಾರ) ಚಿತ್ರ ಲೇಖನ ಆಕರ್ಷಕ. ಗಿರ್ ಸಿಂಹಗಳ ಸಂತತಿ ವೃದ್ಧಿಗೊಳ್ಳುತ್ತಿರುವುದು ಹೆಮ್ಮೆಯ ವಿಷಯ.

–ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು, ಎಚ್.ಆನಂದಕುಮಾರ್ ಚಿತ್ರದುರ್ಗ

### ಮರೆಯಲಾಗದ ಜ್ಞಾನಜ್ಯೋತಿ

ಸವಿ ಸವಿ ನೆನಪು ಅಂಕಣದಲ್ಲಿ 'ಮರೆಯಲಾದೀತೆ ಈ ಜ್ಞಾನ ದೇಗುಲವ' ಬರಹ 1962ರಿಂದ 1965ರವರೆಗೆ ನಾನು ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಸುಮಧುರ ಸವಿ ನೆನಪುಗಳನ್ನು ಮರುಕಳಿಸುವಂತೆ ಮಾಡಿತು. ಎಲ್ಲಕ್ಕಿಂತ ಮಿಗಿಲಾಗಿ ಡಾ.ಎಚ್ಚೆನ್ ಅವರಿಂದಾಗಿ ಕಾಲೇಜು ಸರ್ವತೋಮುಖ ಅಭಿವೃದ್ಧಿ ಸಾಧಿಸಿತು.

–ಪ್ರೊ.ಡಿ.ಎನ್. ರಾಮಕೃಷ್ಣ ರಾವ್ ಬೆಂಗಳೂರು

### ಸಮಯೋಚಿತ

'ಸೆಲೆಬ್ರಿಟಿ' ಅಂಕಣದಲ್ಲಿ 'ಮೆಗಾ ಕನಸುಗಳ ಚಕ್ರವರ್ತಿ' ಬರಹದಲ್ಲಿ (ಹನಿ) ಭಾರತೀಯ ಚಿತ್ರರಂಗದ ದಾಖಲೆ ನಿರ್ದೇಶಕ ಅರವತ್ತೇಳು ವರ್ಷದ ರಾಜಮೌಳಿ ಅವರ ಬಗೆಗಿನ ಬರಹ ಸಮಯೋಚಿತ. ತೆಲುಗು ಚಿತ್ರರಂಗಕ್ಕೆ ರಾಜಮೌಳಿಯವರಂಥ ನಿರ್ದೇಶಕರ ಅಗತ್ಯ ಖಂಡಿತಾ ಇದೆ.

–ರಮ್ಯಾ ಬೆಳ್ಳಾವೆ ಉಡುಪಿ

### ಗೊಂದಲವಾಯಿತು

'ಸೆಲೆಬ್ರಿಟಿ' ಬರಹದಲ್ಲಿ ಮೊದಲು ರಾಜಮೌಳಿ ಎಂದು ಬರೆದು ಬಳಿಕ 5–6 ಬಾರಿ ಚಂದ್ರಮೌಳಿ ಎಂದು ಬರೆದಿದ್ದೀರಿ. ಕೊನೆಗೆ ಅವರು ರಾಜಮೌಳಿಯೋ ಚಂದ್ರಮೌಳಿಯೋ ಎಂಬ ಗೊಂದಲವಾಯಿತು. ಇದೇ ಬರಹದಲ್ಲಿ 'ಕಾಶಾಯ ವಸ್ತ್ರ' ಎಂದಿದೆ. ಅದು 'ಕಾಷಾಯ ವಸ್ತ್ರ' ಎಂದಾಗಬೇಕು.

–ಶಿವಕುಮಾರ್ ಎನ್. ಬೆಂಗಳೂರು


